**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ನಮ್ಮ ಮದುವೆಯ ಸಮಯದಲ್ಲಿ ಆರೋಪಿಯ ನನ್ನ ತಂದೆ-ತಾಯಿಯಿಂದ 10 ಲಕ್ಷ ನಗದು ಮತ್ತು 100 ಗ್ರಾಂ ಚಿನ್ನವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿಯು ಮದುವೆಯ ನಂತರದಲ್ಲಿ ಸ್ವಲ್ಪ ದಿನಗಳ ಕಾಲ ಅನ್ಯೋನ್ಯವಾಗಿದ್ದು ನಂತರದಲ್ಲಿ ವರದಕ್ಷಿಣೆಯನ್ನು ತರುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಿರಲಿಲ್ಲ ಎಂದರೆ ಸರಿ. ಅದೇ ರೀತಿಯಾಗಿ ಮೊದಲನೇ ಮಗುವಿನ ಹೆರಿಗೆಯ ಸಮಯದಲ್ಲಿ ಆರೋಪಿಯು ನನ್ನನ್ನು ನನ್ನ ತವರು ಮನೆಗೆ ಕಳುಹಿಸದೇ ಮಾನಸಿಕವಾಗಿ ಹಿಂಸೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ಎನ್.ಆರ್. ಪುರದ ಪುಷ್ಪ ಆಸ್ಪತ್ರೆಯಲ್ಲಿ ನನಗೆ ಹೆಣ್ಣುಮಗು ಜನಿಸಿದ ಸಮಯದಲ್ಲಿ ಆರೋಪಿಯು ನನಗೆ ಗಂಡು ಮಗು ಬೇಕು ಎಂದು ಅವಮಾನಿಸಿ ಬೇರೆ ಮದುವೆಯಾಗುತ್ತೇನೆ ಎಂದು ಮತ್ತು ಮನೆ ಬಿಟ್ಟು ಹೋಗುವಂತೆ ಹಿಂಸೆ ನೀಡಿರುವುದಿಲ್ಲ ಎಂದರೆ ಸರಿ. ಆರೋಪಿಯೊಟ್ಟಿಗೆ ಅವರ ತಾಯಿಯೂ ಹಿಂಸೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ನನ್ನ ತಂದೆ ತಾಯಿಗೆ ತಿಳಿಸಿದ ನಂತರ ಸದರಿಯವರು ಆರೋಪಿಗೆ ಬುದ್ದಿ ಹೇಳಿ ಕಳುಹಿಸಿರಲಿಲ್ಲ ಎಂದರೆ ಸರಿ. ದಿ.15.07.2022 ರಂದು ಆರೋಪಿಯು ನನ್ನ ಬಳಿ ಇದ್ದ ಒಡವೆಗಳನ್ನು ಕಸಿದುಕೊಂಡು ನನ್ನನ್ನು ಮನೆಯಿಂದ ಹೊರ ಹಾಕಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನನ್ನ ಸಣ್ಣ ಮಗುವನ್ನು ಕರೆದುಕೊಂಡು ನನ್ನ ತವರು ಮನೆಗೆ ಹೋಗಿರುವುದಿಲ್ಲ ಎಂದರೆ ಸರಿ.

ದಿ.07.03.2021 ರಂದು ನನ್ನ ತಂದೆಯ ಮನೆಯಲ್ಲಿ ಯಾರು ಇಲ್ಲದೇ ಇದ್ದ ಸಮಯದಲ್ಲಿ ಆರೋಪಿಯು ಬಂದು ಅವಾಚ್ಯ ಶಬ್ದದಿಂದ ನಿಂದಿಸಿ ಹಣವನ್ನು ತರದೇ ಇದ್ದಲ್ಲಿ ಮನೆಗೆ ಹಿಂತಿರುಗಿ ಬರದಂತೆ ಕೊಲೆ ಬೆದರಿಕೆಯನ್ನು ಹಾಕಿರುವುದಿಲ್ಲ ಎಂದರೆ ಸರಿ. ತದ ನಂತರ ನನ್ನ ತಂದೆಯ ಮೇಲೆ ಹಲ್ಲೆ ಮಾಡಲು ಬಂದಿರುವುದಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ-8 ರಿಂದ 11 ರವರು ಗಲಾಟೆಯನ್ನು ಬಿಡಿಸಿರುವುದಿಲ್ಲ ಎಂದರೆ ಸರಿ. ಮದುವೆಯ ನಂತರದಲ್ಲಿ ವರದಕ್ಷಿಣೆ ಪಡೆದಿದ್ದರೂ ಸಹಾ ಆರೋಪಿ ಮತ್ತು ಅವರ ತಾಯಿ ನನಗೆ ಹಿಂಸೆಯನ್ನು ನೀಡುತ್ತಿದ್ದರು ಎಂಬ ಅಂಶ ಸುಳ್ಳು ಎಂದರೆ ಸರಿ. ದಿ.09.11.2021 ರಂದು ಆರೋಪಿಯು ಎನ್.ಆರ್. ಪುರ ನ್ಯಾಯಾಲಯದಿಂದ ವಿವಾಹ ವಿಚ್ಛೇದನವನ್ನು ಕೋರಿ ನೋಟೀಸನ್ನು ನೀಡಿರುತ್ತಾರೆ ಎಂಬ ಅಂಶ ಸುಳ್ಳು ಎಂದರೆ ಸರಿ. ತದ ನಂತರ ದಿ.24.11.2021 ರಂದು ನಾನು ಕುದುರೆಮುಖ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿ.25.11.2021 ರಂದು ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಜರುಗಿಸಿ, ಮದುವೆಯ ಆಮಂತ್ರಣ ಪತ್ರಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು ಎಂದರೆ ಸರಿಯಲ್ಲ. ದಿ.26.11.2021 ರಂದು ಆರೋಪಿಯ ಮನೆಗೆ ಹೋಗಿ ಬೀರುವಿನಲ್ಲಿ ಇದ್ದ 10 ಗ್ರಾಂ ಚೈನ್, 2 ಗ್ರಾಂ ಉಂಗುರವನ್ನು ವಶಕ್ಕೆ ಪಡೆದಿರುತ್ತಾರೆ ಮತ್ತು ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರವಣಿಗೆ ಆಗಿದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**:ಮರು ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನನ್ನ ಮತ್ತು ಆರೋಪಿಯ ಮಧ್ಯೆ ರಾಜಿ ಸಂದಾನವಾಗಿರುತ್ತದೆ ಎಂದರೆ ಸರಿ. ದಿ.02.12.2024 ರಂದು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದ ಪೂರ್ವದಲ್ಲಿ ಆರೋಪಿಯೊಟ್ಟಿಗೆ ರಾಜಿ ಸಂದಾನವನ್ನು ಪ್ರಯತ್ನಿಸಿದ್ದೆ ಆದರೆ ಅದು ಸಫಲವಾಗಿರುವುದಿಲ್ಲ ಎಂದರೆ ಸರಿ. ಆರೋಪಿಯೊಟ್ಟಿಗೆ ರಾಜಿ ಮಾಡಿಕೊಂಡ ಕಾರಣ ದಿ.02.12.2024 ರಂದು ನಾನು ನುಡಿದ ಸಾಕ್ಷ್ಯವನ್ನು ನಾನು ಅಲ್ಲಗಳೆದಿರುತ್ತೇನೆ ಎಂದರೆ ಸರಿಯಲ್ಲ. ದಿ.02.12.2024 ರಂದು ನಾನು ನುಡಿದಿರುವ ಸಾಕ್ಷ್ಯ ಮತ್ತು ನನ್ನ ಪರವಾಗಿ ಗುರುತಿಸಿರುವ ದಾಖಲಾತಿಗಳು ಸರಿಯಾಗಿದ್ದರೂ ಸಹಾ ಆರೋಪಿಯು ರಾಜಿಗೆ ಒಪ್ಪುವುದಿಲ್ಲ ಎಂದು ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಜೀವನಾಂಶವನ್ನು ಕೋರಿ ನೀಡಿದ ಅರ್ಜಿಯನ್ನು ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ. ಆರೋಪಿಯು ನನಗೆ ಅವಾಚ್ಯ ಶಬ್ದದಿಂದ ನಿಂದಿಸಿ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿದ್ದರೂ ಸಹಾ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುರು ಹಿರಿಯರ ಸಮಕ್ಷಮ ರಾಜಿ ಸಂದಾನವಾಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.